# ಆಲಮ್ಮನ ಕನಸು



ಅದೊಂದು ಸುಂದರವಾದ ಹಳ್ಳಿ. ಅಲ್ಲಿ ಹೆಚ್ಚಿಗೆ ವಾಸವಾಗಿದ್ದವರು ಗೊಲ್ಲರು. ತಮ್ಮ ಹೈನುಗಾರಿಕೆಯಿಂದ ಆರ್ಥಿಕವಾಗಿ ಅವರೆಲ್ಲಾ ಸಬಲರಾಗಿದ್ದರು. ಪ್ರತಿಯೊಂದು ಮನೆಯಲ್ಲೂ ಎಂಟ್ಹತ್ತು ಹಿಂಡುವ ಹಸುಗಳಿದ್ದವು. ಹೀಗಾಗಿ ಹಾಲು, ಬೆಣ್ಣೆ, ಮೊಸರು, ಮಜ್ಜಿಗೆಗೆ ಆ ಊರು ಹೆಸರಾಗಿತ್ತು. ಆದರೆ ಆಗ ಅಲ್ಲಿ ಶಾಲೆಗಳಿರಲಿಲ್ಲ. ಅನಕ್ಷರಸ್ತರ ಸಂಖ್ಯೆ ಹೆಚ್ಚಾಗಿತ್ತು ಅದಾಗ್ಯೂ ಅವರೇನೂ ದಡ್ಡರಾಗಿರಲಿಲ್ಲ. ಮುಗ್ಧರೂ, ನಿರಾಳ ಮನದವರೂ ಆಗಿದ್ದರು. ಕುಬುದ್ಧಿ, ಕುಕೃತ್ಯಕ್ಕೆ ಯಾರ ಮನವೂ ಹೋಗುತ್ತಿರಲಿಲ್ಲ.

ಆ ಊರಿನ ಹೊರಗೊಂದು ಗುಡಿಸಲು ಹಾಕಿಕೊಂಡು ಆಲಮ್ಮ ವಾಸವಾಗಿದ್ದಳು. ಅಲ್ಲಿ ಆಲಮ್ಮ ಒಬ್ಬಳೇ ರಾಣಿಯಂತಿದ್ದಳು. ಅವಳ ಹೊರತು ಮತ್ತಾರೂ ಅಲ್ಲಿರಲಿಲ್ಲ. ಚಿಕ್ಕಂದಿನಲ್ಲೇ ತಂದೆ– ತಾಯಿಗಳನ್ನು ಕಳೆದುಕೊಂಡು ಅಜ್ಜಿಯ ಆರೈಕೆಯಲ್ಲಿ ಆಲಮ್ಮ ಬೆಳೆದಿದ್ದಳು. ಈಗ ಅಜ್ಜಿಯೂ ಕಣ್ಮುಚ್ಚಿದ್ದಳು. ಅಜ್ಜಿಯ ಆಸ್ತಿಯೆಂದರೆ ಆ ಮುರಿದ ಗುಡಿಸಲು. ಇದು ಆಲಮ್ಮನ ಭಾಗ್ಯಕ್ಕೆ ಅರಮನೆಯೇ ಆಗಿತ್ತು.

ಆಲಮ್ಮ ನಿರಾಭರಣ ಸುಂದರಿ. ಬಣ್ಣ ಮಾತ್ರ ಕಪ್ಪಾಗಿತ್ತು. ಆದರೂ ಅವಳು ಚೆಲ್ವಿಕೆಗೆ ಆ ಬಣ್ಣ ಕುಂದುಂಟು ಮಾಡಿರಲಿಲ್ಲ ಈ ಹಳ್ಳಿಗೆ ಅವಳೇ ಚೆಲುವೆ ಎಂದು ಆಡಿಕೊಳ್ಳುತ್ತಿದ್ದುದು ಆಲಮ್ಮನ ಕಿವಿಗೂ ಬಿದ್ದಿತ್ತು. ಹೀಗಾಗಿ ಆಲಮ್ಮ ಬೀಗಿ ನಡೆಯುತ್ತಿದ್ದಳು.

ಆಕೆ ತನ್ನ ಮಾತುಗಾರಿಕೆಯಿಂದ ಪೇಟೆಯಲ್ಲಿ ಚೆನ್ನಾಗಿ ವ್ಯಾಪಾರ ಮಾಡಿ ಬರುತ್ತಿದ್ದಳು. ಅವರಿವರ ಮನೆಯಲ್ಲಿ ಹಾಲನ್ನು ಹಾಕಿಸಿಕೊಂಡು ಪೇಟೆಯಲ್ಲಿ ಮಾರಿ ಒಂದು ಚಿಕ್ಕಾಸನ್ನೂ ಹಾಳು ಮಾಡದೆ ಕೂಡಿಡುತ್ತಿದ್ದಳು. ಒಂದು ಕುಡಿಕೆಯಲ್ಲಿ ಹಣ ತುಂಬಿತ್ತು. ಆ ಹಣದಿಂದ ಒಂದು ಕೋಳಿಯನ್ನು ಕೊಂಡು ತಂದಳು. ಕಾಳು–ಕಡಿಯನ್ನು ಸಮಯಕ್ಕೆ ಸರಿಯಾಗಿ ತಿನ್ನಿಸುತ್ತಿರಲು ಕೋಳಿ ಮೊಟ್ಟೆಯನ್ನು ಹಾಕತೊಡಗಿತು. ಇದರಿಂದ ಆಕೆಯ ಆದಾಯ ಇಮ್ಮಡಿಸಿತು. ಅವರಿವರ ಮನೆಯಲ್ಲಿ ಹಾಲು ಹಾಕಿಸಿಕೊಂಡು ಮಾರುವುದಕ್ಕಿಂತ ಒಂದು ಹಸುವನ್ನು ಕೊಂಡುಕೊಂಡರೆ ಹೆಚ್ಚಿನ ಲಾಭವಾಗುವುದು ಎಂದು ಲೆಕ್ಕ ಹಾಕಿ ಆಕಳನ್ನು ಕೊಂಡು ತಂದಳು.

ಇದರಿಂದ ಇನ್ನೂ ಆದಾಯ ಬರತೊಡಗಿತು. ಆಲಮ್ಮ ಸಂಪೂರ್ಣ ಬದಲಾದಳು. ಮೈಮೇಲೆ ಬಂಗಾರದ ಒಡವೆ, ಒಳ್ಳೆಯ ಸೀರೆ ರಾರಾಜಿಸಿದವು. ವಾಸಕ್ಕಾಗಿ ಈಗ ಗುಡಿಸಲಿನ ಜಾಗದಲ್ಲಿ ಒಳ್ಳೆಯ ಮನೆಯೊಂದು ತಲೆಯೆತ್ತಿತು. ಹೀಗೆ ದಿನವೂ ಲಾಭಾಂಶ ಏರ ತೊಡಗಿತು. ಮೊದಲು ಕುಡಿಕೆಯಲ್ಲಿ ಹಣ ಕೂಡಿಟ್ಟರೆ ಈಗ ಮಡಿಕೆಯಲ್ಲಿಡತೊಡಗಿದಳು. ಒಮ್ಮೊಮ್ಮೆ ಮಡಿಕೆಯಲ್ಲಿನ ಹಣವೂ ತುಂಬಿ ತುಳುಕುತ್ತಿತ್ತು. ಆಲಮ್ಮ ಅಗರ್ಭ ಶ್ರೀಮಂತಳಾದಳು. ಈಗ ತಾನೂ ಯಾವುದರಲ್ಲೂ ಕಡಿಮೆಯಿಲ್ಲ ಎಂಬ ಅಹಂಕಾರ ಬಂತು. ಈ ದೇಶದ ರಾಜಕುಮಾರನ ಕಣ್ಣಿಗೇನಾದರೂ ತಾನು ಬಿದ್ದರೆ ಅವನು ತನ್ನನ್ನು ರಾಣಿಯನ್ನಾಗಿ ಮಾಡಿಕೊಳ್ಳಬಹುದು. ‘ಆಲಮ್ಮನನ್ನು ಪಟ್ಟಧರಸಿಯನ್ನಾಗಿ ಮಾಡಿಕೊಂಡು ಈ ದೇಶದ ರಾಣಿಯನ್ನಾಗಿಸುತ್ತೇನೆ’ ಎಂದು ಹೇಳಿದರೂ ಕೇಳುವುದಿಲ್ಲ. ಆಗ ತಾನು ಇಲ್ಲ ಎಂದು ತಲೆ ಅಲ್ಲಾಡಿಸುತ್ತೇನೆ ಎಂದು ತಲೆ ಅಲ್ಲಾಡಿಸಿದಳು. ಅಷ್ಟೆ, ತಲೆಯ ಮೇಲಿದ್ದ ಹಾಲಿನ ಗಡಿಗೆ ನೆಲಕ್ಕೆ ಬಿದ್ದು ಒಡೆದು ಹೋಯಿತು. ಇಲ್ಲಿಯ ತನಕ ಯಾವುದೋ ಭ್ರಮಾಲೋಕದಲ್ಲಿದ್ದ ಆಲಮ್ಮ ಗಡಿಗೆ ಕೆಳಗೆ ಬಿದ್ದು ಒಡೆದು ಹೋದಾಗಲೇ ವಾಸ್ತವ ಪ್ರಪಂಚಕ್ಕೆ ಬಂದಿದ್ದು. ಕೋಳಿ ತಂದದ್ದು, ಮೊಟ್ಟೆ ಮಾರಿದ್ದು , ಹಾಲಿಗಾಗಿ ಸ್ವಂತ ಹಸುವನ್ನು ಕೊಂಡಿದ್ದು, ಮೈಮೇಲೆಲ್ಲಾ ಬಂಗಾರದ ಒಡವೆ, ಪೀತಾಂಬರ ಧರಿಸಿದ್ದು, ಮಹಾರಾಜರು ಬಂದು ಮಹಾರಾಣಿಯನ್ನಾಗಿಸುತ್ತೇನೆಂದು ಹೇಳಿದ್ದು ಎಲ್ಲಾ ಕನಸು.

ತಲೆ ಅಲ್ಲಾಡಿಸಿ ಮಡಿಕೆ ತುಂಬಾ ಇದ್ದ ಹಾಲು ಮಣ್ಣು ಪಾಲಾಯಿತೆಂದು ಅಳತೊಡಗಿದಳು. ಆದರೆ ಕಳೆದುಕೊಂಡಿದ್ದು ಸಿಗುವುದೇನು? ಮೊದಲೇ ಎಚ್ಚರದಿಂದ ನಡೆಯಬೇಕಿತ್ತು ಎಂದುಕೊಂಡಳು. ಅಲ್ಲದೆ ಯಾವ ಪರಿಸ್ಥಿತಿಯಲ್ಲಿಯೂ ಸಿರಿ ಬಂದಾಗ ಅಹಂಕಾರದಿಂದ ವರ್ತಿಸಬಾರದೆಂದು ತನಗೆ ತಾನೇ ಹೇಳಿಕೊಂಡಳು ಆಲಮ್ಮ.

ನೀತಿ: ಸಿರಿವಂತಿಕೆ ಬಂದಾಗ ಅಹಂಕಾರ ತೋರಬಾರದು.

**-ಲಕ್ಷ್ಮೀ ತಿಮ್ಮಪ್ಪ, ಶಿವಮೊಗ್ಗ**